

### ಊದಲು

ಭಾರತವೂ ಸೇರಿದಂತೆ ಜಪಾನ್, ಚೀನಾ, ಪಾಕಿಸ್ತಾನ, ಕೊರಿಯಾ, ನೇಪಾಳ ದೇಶಗಳಲ್ಲಿ ಹೆಚ್ಚು ಬೆಳೆಯುತ್ತದೆ. ಈಜಿಪ್ಟಿನ ಪಿರಮಿಡ್‌ಗಳ ಮಮ್ಮಿಗಳ ಕರುಳಿನಲ್ಲಿ ಇದು ಕಂಡುಬಂದಿದೆ ಅಂದರೆ ಇದರ ಪ್ರಾಚೀನತೆಯನ್ನು ಅರ್ಥಮಾಡಿಕೊಳ್ಳಬಹುದು. ಭಾರತದಲ್ಲಿ ಕರ್ನಾಟಕ, ಉತ್ತರಾಖಂಡ, ಉತ್ತರ ಪ್ರದೇಶ, ತಮಿಳುನಾಡು, ಆಂಧ್ರಪ್ರದೇಶ, ಬಿಹಾರ, ಗುಜರಾತ್ ಇತ್ಯಾದಿ ರಾಜ್ಯಗಳಲ್ಲಿ ಹೆಚ್ಚು ಬೆಳೆಯಲ್ಪಡುತ್ತದೆ. ಹಿಮಾಲಯದ ಬೆಟ್ಟಸಾಲುಗಳ ಮುಖ್ಯ ಬೆಳೆ. ಇದರ ತೆನೆಗಳು ಕುದುರೆಯ ಬಾಲದ ರೀತಿ ಕಾಣುವುದರಿಂದ ತಮಿಳುನಾಡಿನಲ್ಲಿ 'ಕುದುರೆವಾಲಿ' ಎನ್ನುತ್ತಾರೆ. ಹಲವು ಆದಿವಾಸಿ ಸಮುದಾಯಗಳ ನಿತ್ಯದ ಆಹಾರ. ಕರ್ನಾಟಕದ ಕೆಲವು ಭಾಗಗಳಲ್ಲಿ ಮಾತ್ರ ಕಾಣಬಹುದು.

ಹೀಗೆ ಅರಸರು ಹಾಗೂ ಸಾಮಾನ್ಯರೆಂಬ ಭೇದವಿಲ್ಲದೆ ಎಲ್ಲರ ಹಸಿವು ನೀಗಿಸುತ್ತಿದ್ದ ಸಿರಿಧಾನ್ಯಗಳಿಗೆ 'ಬಡವರ ಆಹಾರ'ವೆಂಬ ಹಣೆಪಟ್ಟಿ ಯಾವಾಗ ಅಂಟಿಕೊಂಡಿತೋ ತಿಳಿಯದು. 1621ರಿಂದ 27ರವರೆಗೆ ಆಗ್ರಾದಲ್ಲಿ 'ಡಚ್ ಈಸ್ಟ್ ಇಂಡಿಯಾ' ಕಂಪನಿಯ ಪ್ರತಿನಿಧಿಯಾಗಿದ್ದ ಫ್ರಾನ್ಸಿಸ್ಕೋ ಪ್ಲೆಸರ್ಟ್, ಜೋಳ–ಸಜ್ಜೆ ಮತ್ತು ಬರಗನ್ನು ಬಡವರು ಬಳಸುತ್ತಾರೆ ಎಂದು ಬರೆಯುತ್ತಾನೆ.

### ಸಿರಿಧಾನ್ಯಗಳಿಗೆ ಶುರುವಾದ ಹಿನ್ನಡೆ

ಕ್ರಿ.ಪೂ. 2ನೇ ಶತಮಾನದ ಹೊತ್ತಿಗೆ ಜಗತ್ತಿನ ಎಲ್ಲೆಡೆ ಶೀತ ತಾಪಮಾನ ಹೆಚ್ಚುತ್ತಾ, ಸಿರಿಧಾನ್ಯಗಳನ್ನು ಬೆಳೆಯುವುದು ತ್ರಾಸವಾಯಿತು. ನಿಧಾನವಾಗಿ ಬಾರ್ಲಿ ಮತ್ತು ಗೋಧಿಯ ಕೃಷಿ ಕಾಲಿಟ್ಟವು. ಟಿಬೆಟ್ ಪ್ರಸ್ಥಭೂಮಿಯಲ್ಲಿ ಈ ಪರಿವರ್ತನೆಗೆ ಸ್ಪಷ್ಟ ನಿದರ್ಶನಗಳಿವೆ. ಇನ್ನೊಂದು ಬೆಳವಣಿಗೆಯಲ್ಲಿ ಕೃಷಿಯಲ್ಲಿ ವ್ಯವಸ್ಥಿತ ನೀರಾವರಿ ಪದ್ಧತಿ ಅಳವಡಿಕೆ ನಂತರ ಗೋಧಿ ಮತ್ತು ಭತ್ತದ ವ್ಯಾಪ್ತಿ ಹೆಚ್ಚಿತು.

ಇದಕ್ಕೆ ಉತ್ತಮ ಉದಾಹರಣೆ ಪಂಜಾಬ್ ರಾಜ್ಯ. 'ಫುಡ್ ಗ್ರೈನ್ಸ್ ಆಫ್ ಇಂಡಿಯಾ'ದ 1886ರ ವರದಿ ಪ್ರಕಾರ, 140 ವರ್ಷಗಳ ಹಿಂದೆ (1880–90ರ ಅವಧಿ) ಜೋಳ ಮತ್ತು ಸಜ್ಜೆಗಳು ಪಂಜಾಬಿನ ಶೇ. 86ರಷ್ಟು ಪ್ರದೇಶದಲ್ಲಿ ಬೆಳೆಯುತ್ತಿದ್ದವು. ಆದರೆ 1960ರ ದಶಕದಲ್ಲಿ ವ್ಯಾಪಕ ನೀರಾವರಿ ಸೌಲಭ್ಯ ಹಾಗೂ ಹಸಿರು ಕ್ರಾಂತಿಯಿಂದಾಗಿ ಗೋಧಿ ಮತ್ತು ಭತ್ತಗಳ ಪ್ರವೇಶವಾಗಿ, ಇಂದು ಪಂಜಾಬಿನ ಒಂದು ಎಕರೆಯಲ್ಲಿಯೂ ಸಿರಿಧಾನ್ಯಗಳಿಲ್ಲ.

ಕರ್ನಾಟಕದ ತುಂಗಭದ್ರಾ ಜಲಾಶಯದ ಅಚ್ಚುಕಟ್ಟಿನ ಉದಾಹರಣೆಯನ್ನೇ ನೋಡಿ. 1945ರ ಆಸುಪಾಸು ಜಲಾಶಯ ನಿರ್ಮಾಣಕ್ಕೆ ಸರ್ವೆ ಕೆಲಸ ನಿರ್ವಹಿಸುತ್ತಿದ್ದ ಎಂಜಿನಿಯರುಗಳು ತಮ್ಮ ಟಿಪ್ಪಣಿಯಲ್ಲಿ, 'ಈ ಭಾಗದಲ್ಲಿ ಅನ್ನ ದೊರೆಯುವುದೇ ಕಷ್ಟ, ಎಲ್ಲಿ ನೋಡಿದರೂ ಜೋಳ, ನವಣೆಗಳನ್ನೇ ಬಳಸುತ್ತಾರೆ' ಎಂದು ದಾಖಲಿಸಿದ್ದಾರೆ. ಆದರೆ ಜಲಾಶಯ ನಿರ್ಮಾಣವಾಗಿ ಕಾಲುವೆಗಳಲ್ಲಿ ನೀರು ಹರಿದಿದ್ದೇ ತಡ, ಭತ್ತದ ಕಣಜವಾಗಿ ಮಾರ್ಪಾಡಾಯಿತು.

ಇಂದಿಗೂ ಸಿರಿಧಾನ್ಯಗಳು ಅಲ್ಪಸ್ವಲ್ಪ ಉಳಿದಿರುವುದು ಮಳೆಯಾಶ್ರಿತ ಒಣಭೂಮಿಗಳಲ್ಲಿ ಮಾತ್ರ.

### ಮೂರು ಉಳಿದವು, ಆರು ಅಳಿವಿನತ್ತ ಸರಿದವು, ಯಾಕೆ?

ಭಾರತದಲ್ಲಿ ಒಂಬತ್ತು ಸಿರಿಧಾನ್ಯಗಳು ಜನಪ್ರಿಯ. ಅವುಗಳಲ್ಲಿ ಹಸಿರು ಕ್ರಾಂತಿಯ ಅಬ್ಬರ, ನೀರಾವರಿ ವಿಸ್ತರಣೆ ಹಾಗೂ ಬದಲಾದ ಆಹಾರ ಪದ್ಧತಿಯ ನಂತರವೂ ರಾಗಿ, ಜೋಳ ಹಾಗೂ ಸಜ್ಜೆ ನಶಿಸುವ ಮಟ್ಟಕ್ಕೆ ಹೋಗಲಿಲ್ಲ. ಆದರೆ ನವಣೆ, ಸಾವೆ, ಊದಲು, ಬರಗು, ಕೊರಲೆ, ಹಾರಕಗಳು ಜನಮಾನಸದಿಂದ ಕಣ್ಮರೆಯಾಗುವಷ್ಟು ಕಡಿಮೆಯಾದವು. ಕಾರಣ ಏನಿರಬಹುದು ಎಂದು ನೋಡಿದರೆ; ರಾಗಿ, ಜೋಳ ಮತ್ತು ಸಜ್ಜೆಗಳಿಗೆ ಸಿಪ್ಪೆ ಇಲ್ಲ. ಉಳಿದವಕ್ಕೆ ಸಿಪ್ಪೆ ಇದೆ. ಈ ಸಿಪ್ಪೆ ತೆಗೆಯುವುದು ಬಹು ತ್ರಾಸದಾಯಕ. ಹಾರಕವನ್ನೇ ನೋಡಿ, ಅದರ ಅಕ್ಕಿ ತೆಗೆಯುವುದು ಕಡು ಕಷ್ಟದ ಕೆಲಸ. ಹಾರಕವನ್ನು ಮಳೆಯಲ್ಲಿ ನೆನೆಯದಂತೆ ಕಟಾವು ಮಾಡಿ, ಕಾಳು ರಾಶಿ ಮಾಡಿಕೊಂಡು, ಬೀಸುವ ಕಲ್ಲಿಗೆ ಗೋಣಿ ತಾಟು ಅಂಟಿಸಿ ನಿಧಾನವಾಗಿ ಬೀಸುತ್ತಾ ಅಕ್ಕಿ ಮಾಡಿಕೊಳ್ಳಬೇಕಿತ್ತು.



### ಬರಗು

ಪನಿವರಗು ಎಂಬ ಹೆಸರೂ ಇದೆ. ಕರ್ನಾಟಕ, ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ ಹಾಗೂ ತಮಿಳುನಾಡುಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಬಿಹಾರದಲ್ಲಿ ವರ್ಷಪೂರ್ತಿ ಬೆಳೆಯುವ ವಾಡಿಕೆ ಇದೆ. ಕಾಳಿನ ಬಣ್ಣ ಹಳದಿ. ಕೋಳಿ, ಲವ್ ಬರ್ಡ್ಸ್ ಇತ್ಯಾದಿ ಹಕ್ಕಿಗಳಿಗೆ ಪ್ರಿಯವಾದ ಕಾಳು.

ಅನ್ನ ಮಾಡುವ ಮುನ್ನ ಅಕ್ಕಿಯನ್ನು ನೀರಿನಲ್ಲಿ ಜಾಲಿಸುತ್ತಾ ಕಲ್ಲು ತೆಗೆಯಬೇಕಿತ್ತು. ಉಳಿದ ಸಿರಿಧಾನ್ಯಗಳ ಕಥೆಯೂ ಇದಕ್ಕಿಂತ ಭಿನ್ನವಿರಲಿಲ್ಲ. 70ರ ದಶಕದಲ್ಲಿ ಹಿಟ್ಟು ಮಾಡುವ ಮಿಲ್ಲುಗಳು ಬಂದವು. ರಾಗಿ, ಜೋಳ, ಸಜ್ಜೆಯನ್ನು ಬೀಸಿ ಹಿಟ್ಟು ಮಾಡುವ ತಾಪತ್ರಯ ತಪ್ಪಿತು. ಆದರೆ ಉಳಿದ ಆರು ಸಿರಿಧಾನ್ಯಗಳ ಅಕ್ಕಿ ತೆಗೆಯುವ ಯಂತ್ರಗಳು ಬರಲೇ ಇಲ್ಲ. ಹೊಸ ತಲೆಮಾರು ಈ ಬೀಸುವ, ಕುಟ್ಟುವ ತಾಪತ್ರಯವೇ ಬೇಡವೆಂದು ಕೈಬಿಟ್ಟರು.

ನವಣೆಯ ಕುಟ್ಟಿ ಕುಟ್ಟಿ  
ನೊಯ್ದಾವ ಎರಡೂ ರಟ್ಟಿ  
ಬೆಳವಲ ನಾಡೀಗೆ ನನ್ನಾಕ ಕೊಟ್ಟಿ...

ಎಂದು ಉತ್ತರ ಕರ್ನಾಟಕಕ್ಕೆ ಮದುವೆಯಾಗಿ ಬಂದ ಮಲೆನಾಡ ಹೆಣ್ಣುಮಗಳ ಜನಪದ ಹುಟ್ಟಿಕೊಂಡಿದ್ದು ಈ ಹಿನ್ನೆಲೆಯಲ್ಲಿಯೇ.

### ಸಿರಿಧಾನ್ಯಗಳು ಮತ್ತು ಅಕ್ಕಡಿ ಪದ್ಧತಿ

ಸಿರಿಧಾನ್ಯಗಳಿಗೂ ಅಕ್ಕಡಿ ಬೇಸಾಯಕ್ಕೂ ಹತ್ತಿರದ ಸಂಬಂಧ. ಕೃಷಿ ವಿಕಾಸದ ಹಾದಿಯಲ್ಲಿ ಇದೊಂದು ಅತ್ಯುತ್ತಮ ಅನ್ವೇಷಣೆ. ಯಾವಾಗ ಆರಂಭವಾಯಿತು ಎಂಬ ದಾಖಲೆಗಳಿಲ್ಲ. ನಿಸರ್ಗದಲ್ಲಿ ವಿವಿಧ ಕಳೆ, ಗಿಡಗಂಟಿಗಳು ಒಟ್ಟಿಗೆ ಬೆಳೆಯುವುದನ್ನು ಗಮನಿಸಿ ಮನುಷ್ಯ ತನ್ನ ಹೊಲದಲ್ಲಿಯೂ ಇದನ್ನು ಅನುಸರಿಸಿರಬಹುದು ಅಥವಾ ಅನಿವಾರ್ಯತೆ ಹಾಗೂ ಪ್ರಯೋಗಶೀಲ ಗುಣದಿಂದಲೂ ಈ ಪದ್ಧತಿ ಬೆಳಕು ಕಂಡಿರಬಹುದು. ಕಾಲಾಂತರದಲ್ಲಿ ಕೃಷಿಕ ಸಮುದಾಯವು ರೂಪಿಸಿಕೊಂಡ ವಿಶಿಷ್ಟ ಮತ್ತು ವೈಜ್ಞಾನಿಕ ಪದ್ಧತಿ 'ಅಕ್ಕಡಿ ಬೇಸಾಯ' ಎಂಬುದು ನಿಸ್ಸಂಶಯ. ವಿಶೇಷವಾಗಿ ದಕ್ಷಿಣ ಕರ್ನಾಟಕದಲ್ಲಿ ರಾಗಿ ಮುಖ್ಯ ಬೆಳೆಯಾಗಿ, ಅದರ ಜೊತೆಗೆ ಅವರೆ, ಅಲಸಂದೆ, ಜೋಳ, ತೊಗರಿ, ಹುರುಳಿ, ಕುಸುಬೆ, ಸಾಸಿವೆ ಮುಂತಾದ ಏಳೆಂಟು ಬೆಳೆಗಳನ್ನು ಬಿತ್ತುತ್ತಾರೆ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಜೋಳ ಹಾಗೂ ಸಜ್ಜೆ ಜೊತೆಗೆ ಹಲವು ಅಕ್ಕಡಿ ಬೆಳೆಗಳ ಸಂಯೋಜನೆ ಕಾಣಬಹುದು. ಆಹಾರ ಭದ್ರತೆ, ಮಣ್ಣಿನ ಫಲವತ್ತತೆ, ಜಾನುವಾರುಗಳ ಮೇವಿನ ದೃಷ್ಟಿಯಿಂದ ಇದು ಉತ್ತಮ ಕೃಷಿ ಪದ್ಧತಿ.

ದುರದೃಷ್ಟ, ಈ ಪದ್ಧತಿ ನಶಿಸುವ ಹಾದಿಯಲ್ಲಿದೆ. ಸಿರಿಧಾನ್ಯ ಪರಂಪರೆಯನ್ನು ಮರಳಿ ತರುವ ಪ್ರಕ್ರಿಯೆಯಲ್ಲಿ ಈ ಬೆಳೆ ಸಂಯೋಜನೆಯನ್ನೂ ಪುನಶ್ಚೇತನಗೊಳಿಸಬೇಕು.